ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY DEBATES

ಸೋಮವಾರ 18ನೇ ಆಗಸ್ಟ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು

ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರನ್ನು ತುರ್ತಾಗಿ ನೋಡುವುದಕ್ಕೆ ಹೋಗಿದ್ದಾರೆ. ಪ್ರಶ್ನೋತ್ತರ ಕಾಲ ಮುಗಿಯುವುದರೊಳಗೆ ಬರುತ್ತಾರೆ ಕೊನೆಯಲ್ಲಿ ಅವರ ಪ್ರಶ್ನೆಗಳನ್ನು ತೆಗೆದುಕೊಳ್ಳೋಣ.

ಮೈಸೂರು ನಗರದಲ್ಲಿ ಕ್ರೀಡಾಶಾಲೆ.

439 - ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಮೈಸೂರು ನಗರದಲ್ಲಿ ಒಂದು ಕ್ರೀಡಾ ಶಾಲೆ ಪ್ರಾರಂಭಿಸಬೇಕೆಂದು ಬೇಡಿಕೆ ಸರ್ಕಾರಕ್ಕೆ ಬಂದಿದೆಯೇ?*

ಆ) *ಚಾಮುಂಡೀ ವಿಹಾರ ಕ್ರೀಡಾ ಚುಟುವಟಿಕೆ ನಿರಂತರವಾಗಿ ನಡೆಯಲು ಒಂದು ಕ್ರೀಡಾ ಶಾಲೆ ತೆರೆಯುವುದು ಅವಶ್ಯಕವೆಂದು ಸರ್ಕಾರ ಯೋಜನೆಯನ್ನು ಹಾಕಿಕೊಂಡಿದೆಯೇ?*

ಇ) *ಹಾಗಿದ್ದಲ್ಲಿ ಯಾವಾಗ ಈ ಕ್ರೀಡಾ ಶಾಲೆ ಪ್ರಾರಂಭವಾಗಲಿದೆ?*

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೇಳುತ್ತಿದ್ದ ಹಾಗೆ ಉಪ ಪ್ರಶ್ನೆ ಕೇಳಲೇ ಬಾರದು ಎನ್ನುವ ರೀತಿಯಲ್ಲಿ ಉತ್ತರ ಇದೆ. ಮಾನ್ಯ ಸಚಿವರು 28-5-97ರಂದು ಮೈಸೂರಿನಲ್ಲಿ ಇಂಡೋರ್ ಸ್ಟೇಡಿಯಂ ಅನ್ನು ಉದ್ಘಾಟನೆ ಮಾಡುವಂತಹ ಸಂದರ್ಭದಲ್ಲಿ ಜಿಲ್ಲಾ ಮಂತ್ರಿಗಳು ಇದ್ದಂತಹ ಸಮಯದಲ್ಲೇ ಶಾಸಕರಾದ ರಾಮದಾಸ್ ಅವರು ಕ್ರೀಡಾ ಶಾಲೆಯನ್ನು ಇಲ್ಲಿ ಪ್ರಾರಂಭ ಮಾಡುವುದಕ್ಕೋಸ್ಕರ ಮನವಿ ಮಾಡಿದ್ದಾರೆ ಆ ಮನವಿಯನ್ನು ಪುರಸ್ಕರಿಸಿ ಇದರ ಬಗ್ಗೆ ನಿರ್ಧಾರ ಕೈಗೊಳ್ಳುತ್ತೇವೆಂದು ತಿಳಿಸಿದ್ದಾರೆ. ಅದು ದೂರದರ್ಶನದಲ್ಲಿ ಮತ್ತು ವೃತ್ತಪತ್ರಿಕೆಗಳಲ್ಲಿ ಕೂಡ ಪ್ರಸಾರವಾಗಿದೆ. ದೂರದರ್ಶನದಲ್ಲಿ ಮತ್ತು ಪತ್ರಿಕೆಗಳಲ್ಲಿ ಬಂದಂತಹ ವಿಚಾರ ಇಡೀ ದೇಶದಾದ್ಯಂತ ಪ್ರಚಾರವಾಗಿರುತ್ತದೆ. ಆದರೆ ಇಲ್ಲಿ ಮನವಿಯೇ ಬಂದಿಲ್ಲವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಈ ಶಾಲೆಯನ್ನು ಕೊಡುವುದು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಆದರೆ ಮೈಸೂರು ನಗರದಲ್ಲಿ ಈಗಾಗಲೇ 17 ಕೋಟಿ 65 ಲಕ್ಷ ರೂಪಾಯಿ ಹಣವನ್ನು ಖರ್ಚು ಮಾಡಲಾಗಿದೆ. ಅಲ್ಲಿ ಇನ್ಸ್‌ಟ್ರಕ್ಷರ್ಸ್‌ಗಳು ಇದ್ದು ಹಾಸ್ಟೆಲ್ ಕೂಡ ಇದೆ 20 ಎಕರೆ ಜಮೀನನ್ನು ಇದು ಹೊಂದಿದೆ. ಇದಕ್ಕೆ ಬೇಡಿಕೆ ಇದ್ದರೂ ಕೂಡ ಈ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಏಕೆ ಹೇಳಿದ್ದಾರೆ ಎಂದು ಕೇಳಲಿಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಯಾವುದೇ ಕಾರ್ಯಕ್ರಮಕ್ಕೆ ಕ್ರೀಡಾ ಸಚಿವರು ಹೋದರೆ ಅಲ್ಲಿ ನಮಗೆ ಒಂದು ಕ್ರೀಡಾಂಗಣ ಬೇಕೆಂದು ಕೇಳುವ ಪದ್ಧತಿ ಇದೆ. ಅದರಂತೆ ನಾನು ಮೈಸೂರಿನ ಕಾರ್ಯಕ್ರಮಕ್ಕೆ ಹೋದಾಗ ಕ್ರೀಡಾ ಶಾಲೆಯನ್ನು ಪ್ರಾರಂಭ ಮಾಡುತ್ತೀರಾ ಎಂದು ಕೇಳಿದರು. ನಮ್ಮ ಕರ್ನಾಟಕದಲ್ಲಿ ಮೈಸೂರು ಡಿವಿಜನ್‌ನಲ್ಲಿ ಒಂದು ಬೆಂಗಳೂರು ಡಿವಿಜನ್‌ನಲ್ಲಿ 2 ಕ್ರೀಡಾ ಶಾಲೆಗಳು ಇವೆ. ಮೊದಲನೇ ಹಂತದಲ್ಲಿ ಇಡೀ ರಾಜ್ಯದಲ್ಲಿ 1-1 ಜಿಲ್ಲೆಗೆ 1-1 ಕ್ರೀಡಾ ಶಾಲೆಯನ್ನು ಪ್ರಾರಂಭ ಮಾಡಬೇಕೆಂದು ಈಗಾಗಲೇ ಸರಕಾರ ಯೋಚನೆ ಮಾಡುತ್ತಿದೆ. ಅದರ ನಂತರ ಜಿಲ್ಲೆಗೆ ಒಂದೊಂದು ಕ್ರೀಡಾ ಶಾಲೆಯನ್ನು ಮಾಡಬೇಕೆಂದು ಮಾಡಿದ್ದೇವೆ. ಈಗಾಗಲೇ ನಾವು ಮೈಸೂರಿನಲ್ಲಿ ಸ್ಪೋರ್ಟ್ಸ್ ಹಾಸ್ಟೆಲ್ ನಡೆಸುತ್ತಿದ್ದೇವೆ. ಈ ಸ್ಪೋರ್ಟ್ಸ್ ಹಾಸ್ಟೆಲ್‌ನಲ್ಲಿ ಕನಿಷ್ಠ 83 ವಿದ್ಯಾರ್ಥಿಗಳು ಇದ್ದಾರೆ. ಪ್ರತಿ ವರ್ಷ 25 ಲಕ್ಷರೂಪಾಯಿಗಳನ್ನು ಇದಕ್ಕಾಗಿ ಖರ್ಚು ಮಾಡುತ್ತಿದ್ದೇವೆ. ಪ್ರತಿ ಜಿಲ್ಲೆಗೊಂದು ಸ್ಪೋರ್ಟ್ಸ್ ಹಾಸ್ಟೆಲ್ ಶುರು ಮಾಡಿಲ್ಲ. ಪ್ರತಿ ಡಿವಿಜನ್‌ಗೊಂದು ಸ್ಪೋರ್ಟ್ಸ್ ಸ್ಕೂಲ್ ಪ್ರಾರಂಭ ಮಾಡಬೇಕೆಂದು ಏನು ಮಾಡಿದ್ದೇವೆ ಆ ಸಂದರ್ಭದಲ್ಲಿ ಮೊದಲು ಡಿವಿಜನ್‌ಗೆ 1-1 ಆಮೇಲೆ ಜಿಲ್ಲೆಗೆ 1-1 ಸ್ಪೋರ್ಟ್ಸ್ ಸ್ಕೂಲ್ ಪ್ರಾರಂಭ ಮಾಡಿದ ನಂತರ ಆಮೇಲೆ ಮೈಸೂರಿಗೆ ಒಂದು ಸ್ಪೋರ್ಟ್ಸ್ ಸ್ಕೂಲ್ ಪ್ರಾರಂಭ ಮಾಡುತ್ತೇವೆ.

ಶ್ರೀ ಎ. ರಾಮದಾಸ್ : ಸಂಪ್ರದಾಯಕ್ಕೋಸ್ಕರ ನಾನು ಪ್ರಶ್ನೆ ಕೇಳಿದ್ದುದು ಅಲ್ಲ. ಜನಸಾಮಾನ್ಯರ ಒತ್ತಾಯದ ಮೇರೆಗೇ ಕೇಳಿದ್ದುದು. ಶಾಲೆಯನ್ನು ಪ್ರಾರಂಭ ಮಾಡುತ್ತೇವೆಂದು ಸಚಿವರು ಉತ್ತರ ಕೊಟ್ಟರು. ನಮ್ಮಲ್ಲಿ ಇನ್‌ಫ್ರಾಸ್ಟ್ರಕ್ಚರ್ ಇಲ್ಲವೆಂದು ಅಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರತಿ ವರ್ಷಕ್ಕೆ

20,000 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅಲ್ಲಿ 73 ವಿದ್ಯಾರ್ಥಿಗಳು ಇದ್ದಾರೆ. ಅಲ್ಲಿ ನಿಜವಾಗಲೂ ಯಾವ ವಿದ್ಯಾರ್ಥಿಗಳು ಸ್ಪೋರ್ಟ್ಸ್‌ನಲ್ಲಿ ಇದ್ದಾರೆ ಅಂತಹವರಿಗಿಂತಲೂ ಬೇರೆಯವರಿಗೆ ಇದರಿಂದ ಸಹಾಯವಾಗುವ ಪರಿಸ್ಥಿತಿ ಬಂದಿರುವಾಗ ಕೇವಲ ಒಂದು ಶಾಲೆಯನ್ನು ಪ್ರಾರಂಭ ಮಾಡಿ ನಾವು ಖರ್ಚು ಮಾಡುತ್ತಿರುವ ಹಣ ಗ್ರಾಮಾಂತರ ಪ್ರದೇಶದಲ್ಲಿ ಇರುವ ಮಕ್ಕಳು ಕ್ರೀಡೆಯಲ್ಲಿ ಏನು ಆಸಕ್ತಿ ತೋರಿಸುತ್ತಿದ್ದಾರೆ ಅಂತಹ ಮಕ್ಕಳನ್ನು ಸೇರಿಸಿಕೊಂಡು ಶಾಲೆಯನ್ನು ಪ್ರಾರಂಭ ಮಾಡಲಿಕ್ಕೇನು ಸಮಸ್ಯೆ ಎಂದು ನನಗೆ ಅರ್ಥವಾಗುತ್ತಿಲ್ಲ. ಸರಕಾರದಿಂದ ಹಣ ಖರ್ಚಾಗುವುದಿಲ್ಲ. ಈಗಿರುವಂತಹ ಇನ್‌ಫ್ರಾಸ್ಟ್ರಕ್ಚರ್‌ನಲ್ಲಿ ಶಾಲೆ ಮಾಡಲಿಕ್ಕೆ ಎಲ್ಲ ಪ್ರಾವಿಜನ್ಸ್ ಇರುವಾಗ ಏಕೆ ಇದನ್ನು ಅವಾಯ್ಡ್ ಮಾಡುತ್ತಿದ್ದಾರೆಂದು ತಿಳಿಯುತ್ತಿಲ್ಲ.

ಅಧ್ಯಕ್ಷರು : ಅವಾಯ್ಡ್ ಮಾಡುವ ಪ್ರಶ್ನೆ ಅಲ್ಲ. ಒಂದು ಸ್ಪೋರ್ಟ್ಸ್ ಸ್ಕೂಲ್ ಅನ್ನು ರನ್ ಮಾಡಬೇಕಾದರೆ ಅದಕ್ಕೆ ಇರತಕ್ಕಂತಹ ಡೈಮನ್‌ಷನ್ಸ್ ಬೇರೆಯಾಗುತ್ತದೆ. It requires lot of financial expenditure. ಸರಕಾರದ ಪಾಲಿಸಿಯನ್ನು ಅವರು ಹೇಳಿದರು. ಈಗ ಹಾಸ್ಟೆಲ್ಸ್ ಅನ್ನೇ ಜಿಲ್ಲಾವಾರು ಮಾಡಿಲ್ಲ. ಅನಂತರ ಸ್ಪೋರ್ಟ್ಸ್ ಸ್ಕೂಲ್ಸ್ ಮಾಡೋಣ. ಮೊದಲು ರೆವಿನ್ಯೂ ಡಿವಿಜನ್‌ಗೆ 1-1 ಮಾಡುತ್ತೇವೆ ಅನಂತರ ಡಿವಿಜನ್ ವೈಸ್ ಮಾಡುತ್ತೇವೆಂದು ಹೇಳಿದ್ದಾರೆ. ನೀವು ಹೇಳಿದಂತೆ ಇನ್‌ಫ್ರಾಸ್ಟ್ರಕ್ಚರ್ ರೆಡಿಯಾಗಿಲ್ಲ. ಸ್ಕೂಲ್ ಮಾಡಲಿಕ್ಕೆ ಬೇಕಾಗಿರತಕ್ಕಂತಹ ಇನ್‌ಫ್ರಾಸ್ಟ್ರಕ್ಚರ್ರೇ ಬೇರೆಯಾಗುತ್ತದೆ. ಹಾಸ್ಟೆಲ್ ಮಾಡತಕ್ಕಂತಹ ಇನ್‌ಫ್ರಾಸ್ಟ್ರಕ್ಚರ್ ಬೇರೆಯಾಗುತ್ತದೆ.

ಶ್ರೀ ಎ. ರಾಮದಾಸ್ : ಎಲ್ಲ ಪೂರ್ಣವಾಗಿದೆ. ಜೊತೆಗೆ ಕೋಚಸ್‌ಗಳು ಏನೂ ಕೆಲಸವಿಲ್ಲದೆ ಆರಾಮಾಗಿ ಕುಳಿತುಕೊಂಡು ಇರುವಂತಹ ಪರಿಸ್ಥಿತಿ ಬಂದಿದೆ.

ಅಧ್ಯಕ್ಷರು : ಅಲ್ಲಿ ಕೋಚಸ್‌ಗಳು ಇರುವುದರಿಂದ ಶಾಲೆ ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಶಾಲೆ ಪ್ರಾರಂಭ ಮಾಡುವುದಕ್ಕೆ ಅಗತ್ಯ ಏನೇನು ಇದೆ ಎಂಬ ಮಾಹಿತಿ ಅವರಲ್ಲಿ ಇರುತ್ತದೆ. ಸ್ಕೂಲ್ ಆಗಬೇಕೆನ್ನುವ ಆತಂಕ ಇದೆ. ಸ್ಕೂಲ್ ಮಾಡಬೇಕಾದರೆ ಏನೇನು ಮೂಲಭೂತ ಅವಶ್ಯಕತೆಗಳು ಇರಬೇಕೆನ್ನುವ ಮಾಹಿತಿ ಅವರ ಹತ್ತಿರ ಇರುತ್ತದೆ. ಸ್ಕೂಲ್ ಮಾಡಲಿಕ್ಕೆ ಅವಕಾಶ ಇದೆಯೇ ಇಲ್ಲವೇ ಎಂದು ಹೇಳುವುದಕ್ಕೆ ಅವರು ಅಧಿಕೃತ ವಕ್ತಾರರಾಗಿರುತ್ತಾರೆ. ನಿಮ್ಮ ಆತಂಕವನ್ನು ವ್ಯಕ್ತಪಡಿಸಲಿಕ್ಕೆ ನೀವು ಹಕ್ಕುದಾರರಾಗಿರುತ್ತೀರಿ ಇವೆರಡರ ಮಧ್ಯ ವಿವೇಚನೆ ಇರಬೇಕಾಗುತ್ತದೆ.

ಶ್ರೀ ಅಜಯಕುಮಾರ್ ಸರನಾಯಕ್ : ಮೈಸೂರಿನಲ್ಲಿ ನ್ಯಾಷನಲ್ ಗೇಮ್ಸ್ ನಡೆದಾಗ 13 ಕೋಟಿ ಖರ್ಚು ಮಾಡಿ ಇಂಡೋರ್ ಗೇಮ್ಸ್ ಮತ್ತು ಬೇರೆ ಬೇರೆ ಇನ್‌ಫ್ರಾಸ್ಟ್ರಕ್ಚರ್ ಮಾಡಿದ್ದೀರಿ, ಇಷ್ಟೊಂದು ಹಣ ಖರ್ಚು ಮಾಡಿದ್ದೀರಿ ಹೀಗಿರುವಾಗ ಏಕೆ ಸ್ಪೋರ್ಟ್ಸ್ ಸ್ಕೂಲ್ ಪ್ರಾರಂಭ ಮಾಡಬಾರದು ಎನ್ನುವ ಅಭಿಪ್ರಾಯವನ್ನು ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ತಾವು ಹೇಳಿದ ಹಾಗೆ ಸ್ಪೋರ್ಟ್ಸ್ ಸ್ಕೂಲ್ ರನ್‌ಮಾಡಬೇಕಾದರೆ ಅದಕ್ಕೆ ಬೇಕಾದಂತಹ ಇನ್‌ಫ್ರಾಸ್ಟ್ರಕ್ಚರ್ ಬೇರೆಯಾಗುತ್ತದೆ. ನಾವು ಸ್ಟೇಡಿಯಂಗೆ ಏನು ಕ್ರಿಯೇಟ್ ಮಾಡಿದ್ದೇವೆ ಅದು ಬೇರೆಯಾಗುತ್ತದೆ.

ಅಧ್ಯಕ್ಷರು : ಸ್ಪೋರ್ಟ್ಸ್ ಸ್ಕೂಲ್ ರನ್ ಮಾಡಬೇಕಾದರೆ ಅದಕ್ಕೆ ವಿಶೇಷವಾದ ಇನ್‌ಪ್ರಾಸ್ಟ್ರಕ್ಚರ್ ಬೇಕಾಗುತ್ತದೆ. ಮಾನ್ಯ ರಾಮ್‌ದಾಸ್‌ರವರೇ, ಸ್ಪೋರ್ಟ್ಸ್ ಸ್ಕೂಲ್ ಅಂದರೆ ನಿಮ್ಮ ಮಾಹಿತಿಗೋಸ್ಕರ ಹೇಳಿರುತ್ತೇನೆ ಹರಿಯಾಣ ಪ್ರದೇಶದ ಚೈಲ್ ಎನ್ನುವ ಊರಿನಲ್ಲಿ ಬಿಟ್ಟರೆ, ರಿಯಲ್ ಸ್ಪೋರ್ಟ್ಸ್ ಸ್ಕೂಲ್ ಬೇರೆ ಎಲ್ಲೂ ಇಲ್ಲ. ಸ್ಪೋರ್ಟ್ಸ್ ಸ್ಕೂಲ್ ಅಂದರೆ ಅದೊಂದೇ ಇರುವುದು. ನಮ್ಮ ಸದಸ್ಯರ ಒಂದು ಡೆಲಿಗೇಷನ್ ಮಾಡಿ ಯುವಕರನ್ನು ಕಳಿಸಿ ಅವರು ಆ ಶಾಲೆಯನ್ನು ನೋಡಿಕೊಂಡು ಬರಲಿ. ಆ ರೀತಿ ಮಾಡಲಿಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗುತ್ತದೆ.

ಶ್ರೀ ಎ. ರಾಮದಾಸ್ : ಕಡೇ ಪಕ್ಷ ಅದನ್ನು ಕನ್‌ಸಿಡರ್ ಮಾಡುತ್ತೇವೆಂದಾದರೂ ಮಾನ್ಯ ಸಚಿವರಿಂದ ಮಾನ್ಯ ಅಧ್ಯಕ್ಷರು ಹೇಳಿಸಬೇಕು. ಈಗಾಗಲೇ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದೇವೆ.

ಅಧ್ಯಕ್ಷರು : ಯಾವುದೇ ಸರಕಾರದಲ್ಲೂ ಕೂಡ ಪರಿಶೀಲನೆಗೆ ಕೊರತೆ ಇರುವುದಿಲ್ಲ.

ಶ್ರೀ ಎ. ರಾಮದಾಸ್ : ಆ ರೀತಿಯ ಪರಿಶೀಲನೆಯನ್ನು ನಾನು ಮಾನ್ಯ ಅಧ್ಯಕ್ಷರ ಮೂಲಕ ಕೇಳುತ್ತಿಲ್ಲ.

SRI AJAY KUMAR SARNAYAK : If that reply is going to satisfy him, I can give that reply.

ಅಂತರ್‌ರಾಜ್ಯ ಹೆದ್ದಾರಿ ಅಭಿವೃದ್ಧಿ ಕುರಿತು

440 - ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕು ಬಂಕಾಪುರ ಕ್ರಾಸ್‌ನಿಂದ ಮಹಾರಾಷ್ಟ್ರದ ಜತ್‌ವರೆಗೆ ಅಂತರ್‌ರಾಜ್ಯ ಹೆದ್ದಾರಿ ಅಭಿವೃದ್ಧಿ ಕುರಿತು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ.

ಆ) ಈ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು?

ಇ) ಬಂಕಾಪುರ ಕ್ರಾಸ್‌ನ ಹತ್ತಿರದ ರಾಷ್ಟ್ರೀಯ ಹೆದ್ದಾರಿ ಜಂಕ್ಷನ್ ಕೆಲಸಕ್ಕಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ. ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣ ಮಾಡಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೇಂದ್ರ ಸಾರಿಗೆ ಸಚಿವಾಲಯದ ಸಾಲದ ನೆರವಿನಡಿ ಅಂತರ್‌ರಾಜ್ಯ ಪ್ರಾಮುಖ್ಯತೆ ಯೋಜನೆಯಡಿಯಲ್ಲಿ 226.80 ಲಕ್ಷ ರೂ. ಗಳಿಗೆ ಆಯ್ದ ಭಾಗಗಳನ್ನು ಅಭಿವೃದ್ಧಿಪಡಿಸಲು ಕೇಂದ್ರ ಸಾರಿಗೆ ಸಚಿವಾಲಯದವರು ಮಂಜೂರು ಮಾಡಿರುತ್ತಾರೆ.